ಹಿರಿಯೂರು ತಾಲ್ಲೂಕಿನ ಧರ್ಮಪುರದಿಂದ ಹಳ್ಳಿಕೆರೆ ಗ್ರಾಮಕ್ಕಿರುವ ರಸ್ತೆಯನ್ನು ದುರಸ್ತಿ ಮಾಡುವುದು.

649 (6582) ಶ್ರೀ ಕೆ.ಎಸ್. ಕಿರಣ್ ಕುಮಾರ್ (ಕಳ್ಳಂಬೆಳ್ಳ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರಿಯೂರು ತಾಲ್ಲೂಕಿನ ಧರ್ಮಪುರದಿಂದ ಹಳ್ಳಿಕೆರೆ ಗ್ರಾಮಕ್ಕಿರುವ ರಸ್ತೆಯು ಹಳ್ಳದಿಣ್ಣೆಗಳಿಂದ ಕೂಡಿದ್ದು ಮಳೆಗಾಲದಲ್ಲಿ ರಸ್ತೆಯಲ್ಲಿ ನೀರು ನಿಲ್ಲುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದು ನಿಜವೇ;

ಆ) ಗ್ರಾಮಸ್ಥರು ಸರಕು ಸರಂಜಾಮುಗಳನ್ನು ಸಾಗಿಸಲು ಬಳಸುವ ಎತ್ತಿನಗಾಡಿ ಕೂಡ ಓಡಾಡಲಾಗದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ರಸ್ತೆಯನ್ನು ಡಾಂಬರೀಕರಣ ಮಾಡಿ ಪಕ್ಕಾ ರಸ್ತೆಯನ್ನಾಗಿ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಹೌದು.

ಆ) ಬಂದಿದೆ.

ಇ) ಸದರಿ ರಸ್ತೆಯನ್ನು ಡಾಂಬರೀಕರಣ ಮಾಡಿ ಪಕ್ಕಾ ರಸ್ತೆಯನ್ನಾಗಿ ಮಾಡಲು 200506ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 3054 ಜಿಲ್ಲಾ ಪಂಚಾಯತ್ ಸಹಾಯಾನುದಾನದಡಿ ಮತ್ತು ಲೆಕ್ಕಶೀರ್ಷಿಕೆ 5054ರಡಿ ಅನುದಾನಕ್ಕನುಗುಣವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಕೆ.ಎಸ್. ಕಿರಣ್ ಕುಮಾರ್: ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಪ್ರಶ್ನೆ 2ರಲ್ಲಿ 'ಗ್ರಾಮಸ್ಥರು ಸರಕು ಸರಂಜಾಮುಗಳನ್ನು ಸಾಗಿಸಲು ಬಳಸುವ ಎತ್ತಿನಗಾಡಿ ಕೂಡ ಓಡಾಡಲಾಗದ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?' ಎಂದು ಕೇಳಿದ್ದರೆ, ಅದಕ್ಕೆ 'ಬಂದಿದೆ'ಯೆಂದು ಉತ್ತರ ಹೇಳಿದ್ದಾರೆ. ಇದು ಯಾವುದೇ ಒಂದು ರಸ್ತೆಯ ಸ್ಥಿತಿ ಅಲ್ಲ. ನಮ್ಮ ಗ್ರಾಮೀಣ ಭಾಗದಲ್ಲಿರುವಂತಹ ಎಲ್ಲಾ ರಸ್ತೆಗಳೂ ಬಹಳ ದುಃಸ್ಥಿತಿಯಲ್ಲಿ ಇವೆ. ಇದಕ್ಕೆ ಕಾರಣ ಪಿಎಂಜಿಎಸ್‌ವೈಯಲ್ಲಿ ನಾವು ಸದುಪಯೋಗ ಮಾಡಿಕೊಂಡಿಲ್ಲ. ಈಗ ಸಿಎಂಜಿಎಸ್‌ವೈಯಲ್ಲಿ ಏನು ಕೊಡುತ್ತಿದ್ದಾರೆ. ಇದಕ್ಕೂ ಕೂಡ ಕಡಿಮೆ ಕೊಡುತ್ತಿದ್ದಾರೆ. ಅದನ್ನು ಹೆಚ್ಚು ಮಾಡಬೇಕು. ನಂತರ ಈ ರಸ್ತೆಗಳನ್ನು ಡಾಂಬರೀಕರಣವನ್ನು ಮಾಡುವುದಕ್ಕೆ, ಸರ್ಕಾರಕ್ಕೆ ತಾವು ನಿರ್ದೇಶನವನ್ನು ಕೊಡಬೇಕೆಂದು, ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಡಾ॥ ಹೆಚ್. ಸಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೇ, ಧರ್ಮಪುರ ದಿಂದ ಹಳ್ಳಿಕೆರೆಗೆ ರಸ್ತೆ ಉದ್ದ 3 ಕಿ.ಮೀ. ಇದೆ. ಮೊದಲು ಇದನ್ನು ಜಲ್ಲಿ ರಸ್ತೆಯನ್ನು ಮಾಡಲಾಗಿತ್ತು. ಈಗ ಮಳೆ ಬಂದು ಹಾಳಾಗಿದ್ದು, ಗುಂಡಿಗಳು ಬಿದ್ದಿದ್ದು, ಗಿಡಗಳೆಲ್ಲಾ ಬೆಳೆದುಕೊಂಡಿತ್ತು. ಈಗ ಅದನ್ನೆಲ್ಲಾ ಕ್ಲೀನ್ ಮಾಡಿ, ಗುಂಡಿಯನ್ನೆಲ್ಲಾ ಮುಚ್ಚಿ, ವಾಹನಗಳನ್ನು ಓಡಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದರೂ, ಕೂಡ ಹೆಚ್ಚು ಮಳೆಯಾಗಿರುವುದರಿಂದ ಅನಾನುಕೂಲಗಳು

ಆಗಿದೆ. ಅದೇ ರೀತಿಯಲ್ಲಿ 2005–06ನೇ ಸಾಲಿನಲ್ಲಿ ಹಿರಿಯೂರು ತಾಲ್ಲೂಕಿಗೆ 3054 ಲೆಕ್ಕಶೀರ್ಷಿಕೆಯಲ್ಲಿ ಜಿಲ್ಲಾ ಪಂಚಾಯತ್‌ಗೆ 37.7 ಲಕ್ಷ ರೂಪಾಯಿಗಳು, ಮತ್ತು ಲೆಕ್ಕ ಶೀರ್ಷಿಕೆಯಡಿ 5054ರಡಿಯಲ್ಲಿ 10 ಲಕ್ಷ ರೂಪಾಯಿಗಳನ್ನು ಹಂಚಿಕೆ ಮಾಡಿದ್ದೇವೆ. ಅದು ಅಲ್ಲದೇ ಹೊಸ ಸೇತುವೆ, ಮತ್ತು ಮೋರಿಗಳಿಗೆ ಚಿತ್ರದುರ್ಗ ಜಿಲ್ಲೆಗೆ 19.13 ಲಕ್ಷ ರೂಪಾಯಿ ಮತ್ತು ಹಳ್ಳಿಕೆರೆ, ಧರ್ಮಪುರಿ ರಸ್ತೆಗಳಿಗೆ 30 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈಗ ಕೊಟ್ಟಿರುವಂತಹ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ಆದ್ಯತೆಯ ಮೇಲೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಮೆಟಗುಡ್: ಮಾನ್ಯ ಉಪಾಧ್ಯಕ್ಷರೇ, ಇವತ್ತು ಜಿಲ್ಲಾ ಪಂಚಾಯತ್‌ನ ಯಾವ ರಸ್ತೆಯೂ ಸಹ ರಿಪೇರಿ ಇಲ್ಲದೇ ಬಹಳ ಹಾಳಾಗಿ ಹೋಗಿದೆ. ಇಡೀ ನಮ್ಮ ಶಿವಮೊಗ್ಗ ಜಿಲ್ಲೆ ಇರಬಹುದು. ಬೇರೆ ಯಾವುದೇ ಜಿಲ್ಲೆ ಇರಬಹುದು. ಯಾವ ಜಿಲ್ಲೆಯಲ್ಲೂ ಒಂದು ರೋಡ್ ಸಹ ಜಿಲ್ಲಾ ಪಂಚಾಯತ್‌ನದ್ದು ಸರಿಯಾಗಿಲ್ಲ. ಇದರ ಬಗ್ಗೆ ಏಕೆ ಇನ್ನೂ ಕ್ರಮವನ್ನು ತೆಗೆದುಕೊಂಡಿಲ್ಲ?

ಶ್ರೀ ಹೆಚ್.ಪಿ. ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೇ, ಸುಮಾರು ಹಳ್ಳಿಗಳ ರಸ್ತೆಗಳು ಹೆಚ್ಚು ಕಡಿಮೆ ತೊಂದರೆಯಲ್ಲೇ ಇವೆ. ಪಿಎಂಜಿಎಸ್ ಮತ್ತು ಅದೇ ಆಧಾರದ ಮೇಲೆ ಸಿಎಂಜಿಎಸ್ ಅನ್ನು ಮೊದಲನೆಯ ಬಾರಿಗೆ ಕರ್ನಾಟಕ ರಾಜ್ಯದಲ್ಲಿ, ಕಳೆದ ವರ್ಷ ಮತ್ತು ಈ ಸಾರಿ ಪ್ರಧಾನಮಂತ್ರಿ ಗ್ರಾಮಸಡಕ್ ಯೋಜನೆಯಂತೆ, ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಆದರೆ ಕೊಡತಕ್ಕಂಥ ಹಣದಲ್ಲಿ ಈ ಸುಮಾರು 1,15,000 ಕಿ.ಮೀ. ಉದ್ದವಿರುವ ಈ ಗ್ರಾಮೀಣ ರಸ್ತೆಗಳನ್ನು, ಒಮ್ಮೆಲೆ ನಾವು ಮಾಡುವುದಕ್ಕೆ ಸಾಧ್ಯವಾಗದೇ ಹೋದರೂ, ಓಡಾಡುವುದಕ್ಕೆ ತೊಂದರೆಯಾದಾಗ ಜಿಲ್ಲಾಪಂಚಾಯತ್ ಶೀರ್ಷಿಕೆಯಡಿ ಕೊಡುವಂತಹ ಅನುದಾನವನ್ನು ಬಳಸಿಕೊಂಡು, ಎಸ್‌ಜಿಆರ್‌ವೈ, ಎಸ್‌ಜಿಆರ್‌ವೈ ಮತ್ತು ಬೇರೆ ಬೇರೆ ಕಾರ್ಯಕ್ರಮಗಳ ಮೂಲಕ ಮಾಡತಕ್ಕಂಥ, ಪ್ರಯತ್ನಗಳು ನಡೆದರೂ ಕೂಡ ಮಾನ್ಯ ಸದಸ್ಯರ ಅಭಿಪ್ರಾಯದಂತೆ ಇದಕ್ಕೆ ಇನ್ನೂ ಹೆಚ್ಚಿನ ಹಣ ಬೇಕಾಗುತ್ತದೆ. ಇಡೀ ರಾಜ್ಯದ ಎಲ್ಲಾ ಜಿಲ್ಲಾ ರಸ್ತೆಗಳ ಒಂದು ಪಟ್ಟಿಯನ್ನು ತಯಾರು ಮಾಡಿದ್ದೇವೆ. ಅದರ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕ್ರಮ ತೆಗೆದುಕೊಳ್ಳುವ ಬಗ್ಗೆ ಪ್ರಯತ್ನಗಳನ್ನು ಮಾಡುತ್ತೇವೆ.

ಅನುದಾನಿತ, ಅನುದಾನರಹಿತ ಶಾಲೆಯ ಶಿಕ್ಷಕರ ಭದ್ರತೆ

650 (6642) ಶ್ರೀ ಕೆ. ರಘುಪತಿ ಭಟ್ (ಉಡುಪಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅನುದಾನರಹಿತ ಶಾಲೆಯ ಶಿಕ್ಷಕರಿಗೆ ಉದ್ಯೋಗ ಭದ್ರತೆ ನೀಡಿ ಕನಿಷ್ಠ ವೇತನ ನೀಡಲು ಸರ್ಕಾರ ಯೋಚಿಸಿದೆಯೇ;

ಆ) ಅನುದಾನಿತ ಶಾಲೆಗಳಲ್ಲಿ ಶಿಕ್ಷಕರ ಖಾಲಿ ಹುದ್ದೆ ತುಂಬಲು ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಅನುದಾನರಹಿತ, ಅನುದಾನಿತ ಹಾಗೂ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಸಮಾನಾಂತರವಾಗಿ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?